ಆಹಾರ ನೀಡಬೇಕಾಗುತ್ತದೆ. ಚಿಕನ್, ಮೊಟ್ಟೆ ಎಲ್ಲವನ್ನೂ ಕೊಡುತ್ತೇವೆ. ತಿಂಗಳಿಗೆ ಅಂದಾಜು ₹1.2 ಲಕ್ಷದಷ್ಟು ಖರ್ಚು ಬರುತ್ತದೆ. ಜಿಲ್ಲಾ ವೆನ್ಲಾಕ್ ಸರ್ಕಾರಿ ಆಸ್ಪತ್ರೆಯಲ್ಲಿ ಆ್ಯಂಟಿರೆಟ್ರೊವೈರಲ್ ಥೆರಪಿ (anti retroviral therapy), ಔಷಧಗಳು ಉಚಿತವಾಗಿ ಸಿಗುತ್ತವೆ. ಎಂಆರ್‌ಐ, ಸಿಟಿ ಸ್ಕ್ಯಾನ್ ಮಾಡಿಸುವ ಸಂದರ್ಭ ಬಂದರೆ ಅದರ ವೆಚ್ಚವನ್ನು ನಾವೇ ಭರಿಸಬೇಕಾಗುತ್ತದೆ. ಸರ್ಕಾರದಿಂದ ವಿಶೇಷ ಸಹಾಯವೇನೂ ಸಿಗುತ್ತಿಲ್ಲ. ಕೆಲವೇ ಕೆಲವು ಮಕ್ಕಳ ಹೆಸರಿನಲ್ಲಿ ತಿಂಗಳಿಗೆ 10 ಕೆ.ಜಿ. ಅಕ್ಕಿ ಸಿಗುತ್ತಿದೆ. ಮತ್ತೆ ಕೆಲವು ಮಕ್ಕಳ ಹೆಬ್ಬೆರಳ ಗುರುತು ಸ್ವೀಕೃತ ಆಗದೆ, ತಾಂತ್ರಿಕ ಕಾರಣದಿಂದ ಅಕ್ಕಿ ದೊರೆಯುತ್ತಿಲ್ಲ. ಪಾಲಕರನ್ನು ಕಳೆದುಕೊಂಡ ಮಕ್ಕಳು ಇಲ್ಲಿ ಬರುವಾಗ ಅವರಿಗೆ ಆಧಾರ್ ಕಾರ್ಡ್ ಕೂಡ ಇರುವುದಿಲ್ಲ. ನಾವು ದಾಖಲೆ ಸಿದ್ಧಪಡಿಸುವಷ್ಟರಲ್ಲಿ ಆ ಮಗುವನ್ನೇ ಕಳೆದುಕೊಳ್ಳುವ ಸಂದರ್ಭವೂ ಬರುತ್ತದೆ’ ಎಂದು ಅವರು ವಾಸ್ತವ ತೆರೆದಿಟ್ಟರು.

‘ಬಾಡಿಗೆ ಮನೆ ಹಳೆಯದಾಗಿದೆ. ಮನೆ ಬದಲಾಯಿಸುವ ಯೋಚನೆಯಿದೆ. ಎಚ್‌ಐವಿ ಪೀಡಿತ ಮಕ್ಕಳ ಆರೈಕೆ ಕೇಂದ್ರಕ್ಕೆ ಬಾಡಿಗೆ ನೀಡಲು ಜನರು ಹಿಂದೇಟು ಹಾಕುತ್ತಾರೆ. ಈ ಮಕ್ಕಳು ನಮ್ಮಂತೆ ಮನುಷ್ಯರಲ್ಲವಾ? ಅವರಿಗೂ ಸಮಾಜದಲ್ಲಿ ಸಮಾನ ಹಕ್ಕು ಇಲ್ಲವಾ? ತಮ್ಮದಲ್ಲದ ತಪ್ಪಿಗೆ ಹುಟ್ಟುತ್ತಲೇ ದುರಂತ ಬದುಕಿಗೆ ಒಡ್ಡಿಕೊಂಡ ಎಳೆಯ ಜೀವಗಳಿಗೆ ಸಮಾಜ ಬೆಂಬಲವಾಗಿ ನಿಲ್ಲಬೇಕು’ ಎಂಬುದು ತಬಸ್ಸುಮ್ ಮನವಿ.

ಸ್ವ ಉದ್ಯೋಗ ಮಾಡುವ ಅವರು, ಆರ್ಥಿಕವಾಗಿ ಅಷ್ಟು ಸ್ಥಿತಿವಂತರಲ್ಲ. ಗಳಿಕೆಯಲ್ಲೇ ಒಂದಿಷ್ಟು ಪಾಲನ್ನು ಇದಕ್ಕಾಗಿ ಮೀಸಲಿಟ್ಟು ಜೊತೆಗೆ ದಾನಿಗಳ ನೆರವಿನಿಂದ ಕೇಂದ್ರದ ಮಕ್ಕಳನ್ನು ಜತನದಿಂದ ನೋಡಿಕೊಳ್ಳುತ್ತಿದ್ದಾರೆ. ಅನಾಥ ಮಕ್ಕಳಿಗೆ ನೆಲೆ ನಿಲ್ಲಲು ಸರ್ಕಾರ ಜಾಗವೊಂದನ್ನು ಒದಗಿಸಬೇಕು ಎಂದು ಅವರು ವಿನಯಪೂರ್ವಕವಾಗಿ ಆಗ್ರಹಿಸುತ್ತಾರೆ.

‘ಸ್ನೇಹದೀಪ’ಕ್ಕೆ ಬಂದು ಹಲವರು ಮದುವೆ ವಾರ್ಷಿಕೋತ್ಸವ, ಮಕ್ಕಳ ಜನ್ಮದಿನಗಳನ್ನು ಆಚರಿಸುತ್ತಾರೆ. ಅಪ್ಪಟ ಹಳ್ಳಿ ಮನೆಯ ವಾತಾವರಣದ ಇಲ್ಲಿ ಅರೆಕ್ಷಣ ಕುಳಿತರೆ, ಮಕ್ಕಳ ಆಟ–ತುಂಟಾಟ, ಹರಟೆ, ಕಲರವ ಮನಸ್ಸಿಗೆ ಹಿತ ನೀಡುತ್ತದೆ. ಜಾತಿ–ಧರ್ಮ ಮೀರಿದ ಮಾನವೀಯ ಮಿಡಿತ, ಪ್ರೀತಿಯ ಪಸೆ ಹೃದಯವನ್ನು ಸೋಂಕುತ್ತದೆ.

ತಬಸ್ಸುಮ್ ಅವರ ನಿಸ್ವಾರ್ಥ ಸೇವಾ ಚಟುವಟಿಕೆಗಳನ್ನು ನೋಡಿದಾಗ ದೇವನೂರ ಮಹಾದೇವ ಅವರ ‘ಸಂಬಂಜ ಅನ್ನೋದು ದೊಡ್ಡದು ಕನಾ’ ಎನ್ನುವ ಮಾತು ನೆನಪಿಗೆ ಬರುತ್ತದೆ. ಅದರಲ್ಲೂ, ರಕ್ತಸಂಬಂಧ, ಜಾತಿ–ಧರ್ಮಗಳಾಚೆಗೆ ಹಬ್ಬಿಕೊಳ್ಳುವ ಮಾನವೀಯ ಸಂಬಂಧಗಳಿಗೆ ಬೆಲೆ ಕಟ್ಟುವುದು ಸಾಧ್ಯವುಂಟೆ?

ಪ್ರತಿಕ್ರಿಯಿಸಿ: feedback@sudha.co.in



# ಬದುಕು ಆಂಬುಲೆನ್ಸ್ ಬಂಡಿ...

## ಆಂಬುಲೆನ್ಸ್ ಚಾಲಕಿಯಾಗಿ ರಾಧಿಕಾ ಸ್ವಾವಲಂಬನೆಯ ಬದುಕು

■ ಕೋಡಿಬೆಟ್ಟು ರಾಜಲಕ್ಷ್ಮಿ